
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 14 | ISSUE - 12 | SEPTEMBER - 2025

ಕುವೆಂಪು ವಿರಚಿತ 'ಬೆರಳ್ ಗೆ ಕೊರಳ್' ಎಂಬ ವೈಚಾರಿಕ ರೂಪಕ

ಡಾ. ಶಿವಕೀರ್ತಿ ವಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ..

ಸಾರಾಂಶ (Abstract) :



ಕುವೆಂಪು ಅವರ 'ಬೆರಳ್ ಗೆ ಕೊರಳ್' ನಾಟಕವು ಪೌರಾಣಿಕ ಕಥಾವಸ್ತುವನ್ನು ತನ್ಮೂಲಕ ಅನಾವರಣಗೊಳಿಸುತ್ತದೆ. ಬಲಿಯ ಕಲ್ಪನೆಯನ್ನು ಲೇಖಕರು ವಿಶಿಷ್ಟ ನೆಲೆಯಲ್ಲಿ ನಿರೂಪಿಸುತ್ತಾರೆ. ಏಕಲವ್ಯ ಒಬ್ಬ ಅಪ್ರತಿಮ ಶಿಷ್ಯನಾಗಿದ್ದು, ಈತನಿಗೆ ಬಿಲ್ವಿದ್ಯೆಗೆ ಸ್ಫೂರ್ತಿಯ ಗುರುಗಳಾದ ದ್ರೋಣಾಚಾರ್ಯರು ತಮ್ಮ ಮತ್ತೊಬ್ಬ ಶಿಷ್ಯ ರಾಜಮನೆತನದ ಅರ್ಜುನನ ಒತ್ತಾಯಕ್ಕೆ ಮಣಿದು ಏಕಲವ್ಯನ ಹೆಬ್ಬೆರಳನ್ನು ಬಲಿ ಪಡೆಯುತ್ತಾರೆ. ಇದನ್ನು ಕುವೆಂಪು 'ಯಜ್ಞ' ಎನ್ನುತ್ತಾರೆ. ಧಾರ್ಮಿಕ ನಂಬಿಕೆಯಾಗಿ ಪ್ರಾಣಿ ಬಲಿಕೊಟ್ಟು ದೇವತೆಯನ್ನು ಮೆಚ್ಚಿಸುವ ಒಕ್ಕಲು ಮನೆತನಗಳು ಇಂದಿಗೂ ಇವೆ. ಇದು ಅನಾಗರೀಕತೆ ಎಂದು ಕಂಡುಬಂದರೂ ಇದಕ್ಕೆ ನಮ್ಮ ಜನರು ಧಾರ್ಮಿಕ ಮಹತ್ವ ಇದೆ ಎಂದು ನಂಬುತ್ತಾರೆ. ಇದನ್ನೇ ಈ ನಾಟಕದಲ್ಲಿ ಪ್ರತಿಭಟನಾತ್ಮಕ ನೆಲೆಯಲ್ಲಿ ವೈಚಾರಿಕ ಅರಿವು ಮೂಡಿಸುವ ಕೈಂಕರ್ಯವನ್ನು ಕುವೆಂಪು ಮಾಡುತ್ತಾರೆ.

ಮುಖ್ಯ ಪದಗಳು (Key Words) : ಅನಸೂಯಾಶೀಲರ್, ಜಲಸ್ತಂಭನ, ಪೊಡವಿ, ಬಿಂಕಂ, ಮನೋಜಾಡ್ಯಂ, ವನಚರರ್, ಹವಿಸ್ಸು.

ಪೌರಾಣಿಕ ವಸ್ತುವನ್ನಾಧರಿಸಿದ ಈ ನಾಟಕವು ಕುವೆಂಪು ಅವರ ಜನಪ್ರಿಯ ನಾಟಕಗಳಲ್ಲಿ ಒಂದಾಗಿದೆ. ಬಹು ಮುಖ್ಯವಾಗಿ ಈ ನಾಟಕವನ್ನು ಆಧರಿಸಿ ಚರ್ಚೆಗೆ ಒಳಗಾಗುವ ವಿಚಾರಗಳೆಂದರೆ ವರ್ಗ ಸಂಘರ್ಷ ಮತ್ತು ವರ್ಣ ಸಂಘರ್ಷ. ಕನ್ನಡದ ನವೋದಯ ಕಾಲಘಟ್ಟದಲ್ಲಿ ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿನ ಸಾಂಪ್ರದಾಯಿಕವಾಗಿ ಆಲೋಚಿಸುವ ಭಾರತೀಯ ಮನಸ್ಥಿತಿಗಳನ್ನು ಜಾಗೃತಿಗೊಳಿಸುವ ಮತ್ತು ಸಾಮಾಜಿಕ ಚಿಂತನೆಗೆ ಒಳಪಡಿಸುವ ಕಾರ್ಯವನ್ನು ಈ ನಾಟಕವು ಗಮನಾರ್ಹವಾಗಿ ಮಾಡಿತು. ಪ್ರಸ್ತುತದ ಸಾಮಾಜಿಕ ವ್ಯವಸ್ಥೆಯ ದುರಂತವನ್ನು ಈ ನಾಟಕದ ಮೂಲಕ ಪ್ರತಿಬಿಂಬಿಸುವಂತೆ ಮಾಡಿದ ಕುವೆಂಪು ಅವರ ಸೃಜನಶೀಲತೆಯು ಶ್ಲಾಘನಾರ್ಹವಾದುದಾಗಿದೆ. ಈ ನಾಟಕದ ಮುಖ್ಯ ಪಾತ್ರ ಏಕಲವ್ಯ. ಈತನ ಬಿಲ್ವಿದ್ಯೆಗೆ ಸ್ಫೂರ್ತಿಯಾದ ಗುರುದ್ರೋಣಾಚಾರ್ಯ, ಈತನ ಮಿತ್ರ ಅಶ್ವತ್ಥಾಮ, ಈತನ ವಿದ್ಯಾ ನಿಪುಣತೆಯನ್ನು ಕಂಡು ಕರುಬುವ ಹಿತಶತ್ರು ಅರ್ಜುನ, ಮಮತೆಯ ನಿಧಿಯೇ ಆದ ಈತನ ತಾಯಿ ಅಬ್ಬೆ – ಈ ಸಂಬಂಧಗಳ ನಡುವಿನ ಸಂಘರ್ಷ, ಸಾಮರಸ್ಯಗಳೇ ನಾಟಕದ ಆಶಯವನ್ನು ಬಲಪಡಿಸುತ್ತಾ ಸಾಗುತ್ತವೆ.

ಮುಖ್ಯವಾಗಿ ಈ ನಾಟಕವು 'ಗುರು', 'ಕರ್ಮ', 'ಯಜ್ಞ' – ಈ ಮೂರು ಪರಿಕಲ್ಪನೆಗಳಲ್ಲಿ ಪ್ರತಿಬಿಂಬಿತವಾಗಿದೆ. ಮೊದಲನೆಯ ದೃಶ್ಯದಲ್ಲಿ ಮನೋಹರವಾದ ದಟ್ಟ ಕಾಡಿನ ನಡುವೆ ದ್ರೋಣಾಚಾರ್ಯರ ಪ್ರತಿಮೆಯನ್ನು ಆರಾಧಿಸುತ್ತಾ ಏಕಲವ್ಯನು ಜಲಸ್ತಂಭನ ಪ್ರಯೋಗ ಮಾಡುವುದರೊಂದಿಗೆ ನಾಟಕವು ಆರಂಭವಾಗುತ್ತದೆ. ಇಲ್ಲಿ ಪ್ರಕೃತಿ ವರ್ಣನೆಗೆ ಕುವೆಂಪು ನೀಡುವ ಪ್ರಾಧಾನ್ಯತೆಯು ನಾಟಕದ ಓದುಗನನ್ನು ಹೊಸಲೋಕಕ್ಕೆ ಕೊಂಡೊಯ್ಯುತ್ತದೆ ಎನ್ನಬಹುದು. ನವೋದಯ ಸಾಹಿತ್ಯದ ಧೋರಣೆಗಳಲ್ಲಿ ಪ್ರಕೃತಿ ವರ್ಣನೆಯು ಮುಖ್ಯ ಸ್ಥಾನವನ್ನು ಪಡೆಯುತ್ತದೆಂಬುದನ್ನು ಇಲ್ಲಿ ಸಾಬೀತುಪಡಿಸಿದಂತಾಗಿದೆ. ಏಕಲವ್ಯನ ಬಳಿಗೆ ತಾಯಿಯಾದ ಅಬ್ಬೆಯು ಪುತ್ರನನ್ನು ಹುಡುಕುತ್ತಾ ಬರುವ ಮಾತೃವಾತ್ಸಲ್ಯದ ದರ್ಶನವು ಸಹೃದಯನಿಗಾಗುತ್ತದೆ. ಏಕಲವ್ಯನು ತನ್ನನ್ನು

ಹುಡುಕುತ್ತಾ ಬಂದ ತಾಯಿಗೆ ತನ್ನ ವಿದ್ಯಾ ಕಲಿಕೆಯ ಹಿನ್ನೆಲೆಯಲ್ಲಿ ನಡೆದ ಸಂಗತಿಯ ವಿವರಣೆ ನೀಡುತ್ತಾನೆ. ತನ್ನ ಗುರು ದ್ರೋಣಾಚಾರ್ಯನು ಬರುವನೆಂದು ಏಕಲವ್ಯನು ತೋರ್ಪಡಿಸುವ ಸಡಗರದ ಚಿತ್ರಣವನ್ನು ನಾವು ಇಲ್ಲಿ ಕಾಣಬಹುದು. ಎರಡನೆಯ ದೃಶ್ಯದಲ್ಲಿ ದ್ರೋಣ ಮತ್ತು ಅಶ್ವತ್ಥಾಮರು ಮಾತುಕತೆ ನಡೆಸುತ್ತಾ ಏಕಲವ್ಯನ ಬಳಿಗೆ ಸಾಗುತ್ತಾರೆ. ಅಮಂಗಳಕ್ಕಾಗಿಯೇ ಕೈಗೊಂಡ ವನಯಾತ್ರೆಯಂತೆ ದ್ರೋಣಾಚಾರ್ಯರು ತಮ್ಮ ನಡುಗೆಯನ್ನು ಭಾವಿಸುತ್ತಾರೆ. ಮಾನಸಿಕವಾಗಿ ಗೊಂದಲಮಯವಾದಂತೆ ತೋರುವ ದ್ರೋಣಾಚಾರ್ಯರ ಪಾತ್ರದ ಮೂಲಕ ಇಡೀ ನಾಟಕಕ್ಕೆ ಕುವೆಂಪು ಹೊಸ ತಿರುವನ್ನು ನೀಡುತ್ತಾರೆ. ಮೂರನೆಯ ದೃಶ್ಯದಲ್ಲಿ ದ್ರೋಣಾಚಾರ್ಯರು ಏಕಲವ್ಯನ ನೈಪುಣ್ಯತೆಯನ್ನು ಕುಗ್ಗಿಸುವಂತೆ ಮಾಡುವ ಅರ್ಜುನನ ಒತ್ತಾಯಕ್ಕೆ ಮಣಿದು ಧರ್ಮ ಸಂಕಟಕ್ಕೆ ಸಿಲುಕುತ್ತಾರೆ. ದ್ರೋಣಾಚಾರ್ಯರು ತಮ್ಮ ಅಂತಃಸಂಕಟವನ್ನು ಏಕಲವ್ಯನಿಗೆ ತಿಳಿಸಿ ಆತನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆಯುತ್ತಾರೆ. ಆ ಸಂದರ್ಭದಲ್ಲಿ ಏಕಲವ್ಯನ ತಾಯಿ ಅಬ್ಬೆಯು ದ್ರೋಣಾಚಾರ್ಯರನ್ನು ಶಪಿಸುತ್ತಾಳೆ. ಇದು ಅವಳ ಪುತ್ರ ವಾತ್ಸಲ್ಯವನ್ನು ಸಮರ್ಥವಾಗಿ ಅನಾವರಣಗೊಳಿಸುತ್ತದೆ. ಇದರೊಂದಿಗೆ ನಾಟಕದ ಅಂತಿಮ ದೃಶ್ಯಕ್ಕೆ ತೆರೆ ಬೀಳುತ್ತದೆ.

ಈ ನಾಟಕದ ಆರಂಭದಲ್ಲಿ ಕಾಣುವ ಪ್ರಕೃತಿ ಆರಾಧನೆ ಚಿತ್ರಣವು ಮೇಲ್ನೋಟಕ್ಕೆ ತೋರುವ ಸಾಮಾನ್ಯ ಸಾಹಿತ್ಯಿಕ ಧೋರಣೆಯಾದರೂ ಸಹ ಅದರ ಹಿಂದೆ ನವೋದಯದ ಮಹತ್ವಪೂರ್ಣ ಆದರ್ಶ ಅಡಗಿದೆ. ಜಗತ್ತನ್ನು ಸುಂದರವಾಗಿ ಕಾಣುವ ಮುಖಾಂತರ ನಮ್ಮೊಳಗಿನ ಎಲ್ಲ ತುಮುಲಗಳಿಂದ ಹೊರಬಂದು ಪ್ರಬುದ್ಧತೆಯ ಕಡೆಗೆ ಎಲ್ಲರೂ ಸಾಗಬೇಕೆಂಬ ಆಶಯವನ್ನು ಈ ನಾಟಕವು ಬಹು ಸಮರ್ಥವಾಗಿ ಪ್ರತಿಪಾದಿಸುತ್ತದೆ. ಇನ್ನೂ ಮುಂದುವರೆದು ಈ ನಾಟಕವು ಮಹಾಭಾರತದ ಆದಿಪರ್ವದಲ್ಲಿನ ಪೌರಾಣಿಕ ವಸ್ತುವೊಂದರ ಮುಖಾಂತರ ವರ್ತಮಾನವನ್ನು ವಿಮರ್ಶೆಗೆ ಒಳಗು ಮಾಡುವ ಹಾಗೂ ಮೌಲ್ಯ ಕಟ್ಟುವ ಕೈಂಕರ್ಯವನ್ನು ಬಹಳ ಕಾಳಜಿಯಿಂದ ನಿರ್ವಹಿಸುತ್ತದೆ. ಈ ನಾಟಕವು ತನ್ಮೂಲಕ ಸಮಾಜದ ಎದುರು ಗಂಭೀರ ಪ್ರಶ್ನೆಗಳನ್ನು ಎತ್ತುವ ಮೂಲಕ ತನ್ನೊಳಗಿನ ದುರಂತ ಚಿತ್ರಣವನ್ನು ಓದುಗರ ಮುಂದಿಡುತ್ತದೆ. ಇಲ್ಲಿ ಏಕಲವ್ಯನು ಪ್ರಕೃತಿಯ ಕೂಸಾಗಿ ಕಂಡರೆ, ತಾಯಿಅಬ್ಬೆಯು ವಾತ್ಸಲ್ಯದ ಪ್ರತೀಕವಾಗಿ ಗಮನ ಸೆಳೆಯುತ್ತಾಳೆ. ಗುರು ದ್ರೋಣಾಚಾರ್ಯ ಸಮಾಜದ ಭಿನ್ನ ನಿಲುವುಗಳನ್ನು ಸಮರ್ಥವಾಗಿ ನಿಭಾಯಿಸಲು ಸೋತ ಮನಃಸ್ಥಿತಿಯುಳ್ಳ ಪಾತ್ರವಾಗಿ ಕಾಣುತ್ತದೆ. ನೈಪುಣ್ಯವೆಂಬುದು ತನ್ನೊಬ್ಬನ ಸ್ವತ್ತು ಎಂಬ ಭ್ರಮಾತ್ಮಕ ನಿಲುವಿನ ಅರ್ಜುನನು ಮಾನವ ಸಹಜ ಈರ್ಷೆ, ರಾಗ–ದ್ವೇಷಗಳ ಪ್ರತೀಕವಾಗಿ ಕಂಡುಬರುತ್ತಾನೆ. ಸಾತ್ವಿಕ ಗುಣಸಂಪನ್ನನಾದ ದ್ರೋಣಾಚಾರ್ಯರ ಮಗ ಅಶ್ವತ್ಥಾಮನು ಮಾದರಿ ಪಾತ್ರವಾಗಿ ಓದುಗರ ಗಮನ ಸೆಳೆಯುತ್ತಾನೆ. ಹೀಗೆ ಎಲ್ಲಾ ಪಾತ್ರಗಳ ಅನಾವರಣದ ಮಾರ್ಗವು 'ಗುರುತತ್ವ', 'ಕರ್ಮತತ್ವ', 'ಯಜ್ಞತತ್ವ' – ಎಂಬ ಮೂರು ದೃಶ್ಯಗಳ ಮೂಲಕವಾಗಿ ಸಾಗುತ್ತದೆ.

ಈ ನಾಟಕವು ಹರಿದು ಬರುತ್ತಿರುವ ಬೆಳಕು, ಸರಿಯುತ್ತಿರುವ ಕತ್ತಲೆಯಿಂದ ಆರಂಭಗೊಂಡು ಸರಿಯುತ್ತಿರುವ ಬೆಳಕು ಮತ್ತು ಆವರಿಸಿಕೊಳ್ಳುತ್ತಿರುವ ಕತ್ತಲೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. ನಾಟಕದ ಈ ಬಗೆಯ ಆದ್ಯಂತಗಳು ಮನುಷ್ಯ ಜೀವನದ ಗತಿಯನ್ನು ಸಾಂಕೇತಿಕವಾಗಿ ಧ್ವನಿಸುತ್ತವೆ. ಈ ನಾಟಕದಲ್ಲಿ ಬಹು ಮುಖ್ಯವಾಗಿ ನಾವು ಹಲವು ಅಂಶಗಳನ್ನು ಪಟ್ಟಿ ಮಾಡಬಹುದಾಗಿದೆ.

ಮೊದಲನೆಯದಾಗಿ ಈ ನಾಟಕವು ಸಾಮಾಜಿಕ ಚಿಂತನೆಯನ್ನು ಓದುಗರಲ್ಲಿ ಮೂಡಿಸುತ್ತದೆ. ಈ ಚಿಂತನೆಯನ್ನು ಎರಡು ಮುಖ್ಯ ಅಂಶಗಳಾಗಿ ವಿಭಾಗಿಸಬಹುದು. ಅವುಗಳೆಂದರೆ :

೧. ನಾಗರೀಕತೆಯ ಜಾಗೃತಿ
೨. ಸಾಂಸ್ಕೃತಿಕ ಜಾಗೃತಿ

ನಾಗರೀಕತೆಯ ಜಾಗೃತಿ ಚರ್ಚೆಯನ್ನು ನಡೆಸುವಾಗ ಅಲ್ಲಿ ಅರ್ಜುನ, ದ್ರೋಣಾಚಾರ್ಯ ಮುಂತಾದವರು ಕಾಣಸಿಗುತ್ತಾರೆ. ಹಾಗೆಯೇ ಸಾಂಸ್ಕೃತಿಕ ಜಾಗೃತಿ ಎನ್ನುವಾಗ ಏಕಲವ್ಯ ಮತ್ತು ತಾಯಿಯಾದ ಅಬ್ಬೆ ಕಾಣಸಿಗುತ್ತಾರೆ. ಕಾಡಿನ ನೀತಿ ನಿಯಮಗಳಿಗೆ ಅನುಸಾರವಾಗಿ ಬದುಕುವ ಮನುಷ್ಯರು ತಮ್ಮ ಮಾನವೀಯ ತುಡಿತದೊಂದಿಗೆ ಬದುಕನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ಲೇಖಕರು ಏಕಲವ್ಯ ಮತ್ತು ಅಬ್ಬೆಯ ಮೂಲಕ ಸಾಬೀತು ಪಡಿಸುತ್ತಾರೆ.

ನಮಗಿರ್ದುದೊಂದೆ: ಬೇಂಟೆದೇವರ್!
ನೀನಾಡುವ ಗೊಂಬೆ ಬೇಂಟೆದೇವರೇನ್?

ಈ ಮೇಲಿನ ಅಬ್ಬೆಯ ಮಾತುಗಳಲ್ಲಿ ಅವಳ ಸಹಜವಾದ ಮುಗ್ಧತೆ ಮತ್ತು ತನ್ನ ಬದುಕಿನ ನಂಬಿಕೆಗಳನ್ನು ಒಡಮೂಡಿಸುವ ಸೂಚನೆ ಕಾಣುತ್ತದೆ. ಅಬ್ಬೆಯ ದೃಷ್ಟಿಯಲ್ಲಿ 'ಬೇಂಟೆ ದೇವರ್' ಅತ್ಯಂತ ಶಕ್ತಿಶಾಲಿಯಾದುದಾದರೆ, ಏಕಲವ್ಯನಿಗೆ 'ಗುರುದೇವನ್' ಅತ್ಯಂತ ಶಕ್ತಿಶಾಲಿಯಾದವನಾಗಿದ್ದಾನೆ. ಇಲ್ಲಿ ಅಬ್ಬೆಯ ಬದುಕಿನ ಕಲೆ, ಏಕಲವ್ಯನ ಗುರುಭಕ್ತಿ ಎರಡೂ ಸಹ ಎರಡು ವಿಭಿನ್ನ ಆಲೋಚನೆಗಳುಳ್ಳ ತಲೆಮಾರುಗಳ ಸಮಾಗಮ ಮಾಡಿದಂತಿದೆ.

ಕಾಡೊಳಿರ್ದೀ ನಮ್ಮ ಬೇಂಟೆದೇವರೆದೇವರ್;
ಇನ್ನಿಲ್ಲಮೆಂದರಿತೆಯೇನ್?
ಎನಿತೆನಿತೊ ದೇವರ್ಕಳಿರ್ಪರ್ ಆ ನಾಡಿನೊಳ್.

ಎಂದು ಏಕಲವ್ಯನು ಹೇಳುವಾಗ ಹೊಸದಾದ ನಾಗರೀಕ ಪ್ರಜ್ಞಾವಲಯಕ್ಕೆ ಅಬ್ಬೆಯನ್ನು ಎಳೆತರುವ ಪ್ರಯತ್ನವಿರುವುದನ್ನು ಕಾಣಬಹುದು. ಹಾಗೆಯೇ ಎಡಪಂಥೀಯ ನಿಲುವಿನಲ್ಲಿ ಏಕಲವ್ಯನ ಮಾತಗಳನ್ನು ಸಾಮಾಜಿಕ ವಿಶ್ಲೇಷಣೆಗೆ ಒಳಪಡಿಸುವುದಾದರೆ ಭಾರತೀಯ ಸಂಸ್ಕೃತಿಯಲ್ಲಿನ ವಿವಿಧತೆಯಲ್ಲಿನ ಏಕತೆಯನ್ನು ಈ ಮಾತುಗಳು ಪ್ರತಿಬಿಂಬಿಸುತ್ತವೆ ಎನ್ನಬಹುದು.

ಗುರು ದ್ರೋಣಾಚಾರ್ಯರು ತನ್ನನ್ನು ಭೇಟಿ ಮಾಡಲು ಬರುತ್ತಾರೆಂಬ ಸಂಗತಿಯನ್ನು ಅದ್ಭುತವೆಂದು ಪರಿಗಣಿಸುವ ಏಕಲವ್ಯ ಆ ಕ್ಷಣಕ್ಕಾಗಿ ಜಾತಕ ಪಕ್ಷಿಯಂತೆ ಕಾಯುವ ಕ್ಷಣಗಳ ಚಿತ್ರಣವು ಮೈನವಿರೇಳಿಸುವಂತಿದೆ. ಉದಾಹರಣೆಗೆ :

ಈಸು ದಿನ ಬದುಕಿದುದೇ ಸುದಿನಮನ್ ಕಂಡೆನ್:
ಇಂದು ಗುರುವೈತಪ್ಪನೆನ್ನೀ ವನಸ್ಥಲಕೆ!
ಪವಿತ್ರತರಮಪ್ಪುದೀ ಕಾಡುಮಲೆ ದಲ್ ದಿಟಂ,
ಪೂಜ್ಯ ಗುರುಪದ ಧೂಳಿಯಿಂ!

ಈ ಮೇಲಿನ ಏಕಲವ್ಯನ ಮಾತುಗಳು ಗುರುಗಳ ಆಗಮನದಿಂದಾಗಿ ಕಾಡುಮಲೆಯು ಖಂಡಿತವಾಗಿ ಪವಿತ್ರವಾಗುತ್ತದೆಂಬ ಸದ್ಭಕ್ತಿಪೂರ್ಣ ನಂಬಿಕೆಯ ಅನಾವರಣ ಮಾಡಿಸುತ್ತವೆ. ಇಲ್ಲಿ ಏಕಲವ್ಯನ ವಿನಯತೆ, ಗುರುಭಕ್ತಿಯು ಆದರ್ಶನೀಯವೆಂಬಂತೆ ಚಿತ್ರಣಗೊಂಡಿದೆ.

ಏಕಲವ್ಯ ಮತ್ತು ಅರ್ಜುನರ ಮಾತುಕತೆಯನ್ನು ಏಕಲವ್ಯನು ತನ್ನ ಅಬ್ಬೆಗೆ ವಿವರಿಸುವ ರೀತಿಯೇ ಬಹು ಸೊಗಸಾದುದಾಗಿದೆ. ಈ ಮೂಲಕ ಅರಮನೆ ಮತ್ತು ಅರಣ್ಯ ಸಂಸ್ಕೃತಿಗಳ ಚಿತ್ರಣವನ್ನು ನಮ್ಮ ಮುಂದಿಡಲಾಗುತ್ತದೆ.

"ವನಚರರ್ ಅನಸೂಯಾಶೀಲರ್,
ಅರಿಯರ್ ಪೆಸರಂ ಮೆರೆವ ಅಹಂಕಾರಮಂ.
ಪೆಸರಾಸೆ, ಅದೊಂದು ನಾಗರಿಕರ್ಗೆ ಮೀಸಲಾಗಿರ್ಪ
ಮನೋಜಾಡ್ಯಂ ಕಣಾ!
ಮೊದಲ್ ಪೇಳ್ ನಿನ್ನ ಪೆರ್ಮೆಯಾ ಪೆಸರಂ."
"ಕಾಡವಂಗೇಂ ಬಿಂಕಂ!" ಎಂದು ಕೊಂಡನ್;
ಮತ್ತೆಂದನ್ "ನಾವಾರೆಂದಿರ್ಪೆ? ಆಳ್ವವರ್! ನೀನಾಳ್!"
ಮಾರ್ನುಡಿದನ್ ಬಿಂಕಕ್ಕೆ ಬಿಂಕಮೊಡ್ಡಿ
"ನನ್ನಯ್ಯನಿಂದೆನಗೆ ಬಂದಡವಿ ಈ ಪೊಡವಿ
ನನ್ನಯ್ಯನಾದಿಂ ಬಳಿಂ ನಾನಿಲ್ಲಿಗೊಡೆಯನ್."

ಈ ಸಾಲುಗಳಲ್ಲಿ ನಾಟಕವು ತನ್ನ ಆಶಯವನ್ನು ಮಾರ್ಮಿಕವಾಗಿ ನುಡಿಯುತ್ತಾ ಸಾಗುತ್ತದೆ. ವರ್ಗ ಸಂಘರ್ಷದ ರೂಪವನ್ನು ಓದುಗನ ಮುಂದೆ ತೆರೆದಿಡುತ್ತದೆ. ಅರ್ಜುನನು ನಾನು ರಾಜಮನೆತನದ ಕುಡಿ ಎಂಬ ಗರ್ವದಿಂದ ಮಾತನಾಡುತ್ತಾ ನಾಡೊಳಗಿನ ಸಂಸ್ಕೃತಿಯೇ ಶ್ರೇಷ್ಠ ಎಂಬಂತೆ ತನ್ನ ಮಾತುಗಳಲ್ಲಿ ಬಿಂಬಿಸುತ್ತಾನೆ. ಅದಕ್ಕೆ ಪ್ರತ್ಯುತ್ತರ ನೀಡುವ ಏಕಲವ್ಯ ಅರಣ್ಯವು ಅನಾದಿಕಾಲದಿಂದಲೂ ನಮ್ಮ ಸ್ವತ್ತು ಅದರ ಪ್ರವೇಶವು ನಾಡಿನ ಜನರಿಗೆ ನಿಷಿದ್ಧ. ನಾಡಿನಜನರ ಸಂಸ್ಕೃತಿಯಂತೆಯೇ ನಮ್ಮದೂ ಸಹ ಉತ್ತಮ ಸಂಸ್ಕೃತಿ ಎಂಬಂತೆ ಸಮರ್ಥಿಸುತ್ತಾನೆ. ಇದು ಪ್ರತಿಭಟನೆಯ ಸಂಕೇತವಾಗಿದೆ. ಸಮಾಜದ ಏಕಸ್ವಾಮ್ಯತೆಯನ್ನು ಪ್ರಶ್ನಿಸುವ ಲೋಪಗಳನ್ನು ಎಚ್ಚರಿಸುವ ಮೂಲಕ ತಿದ್ದುವ ಕಾರ್ಯವನ್ನು ಏಕಲವ್ಯ ಮಾಡುತ್ತಾನೆ. ಇದು ಒಬ್ಬ ಹೋರಾಟಗಾರನಿಗೆ ಅಥವಾ ನಾಯಕನಾದವನಿಗಿರಬೇಕಾದ ಗುಣ ಎಂಬುದು ಈ ಮೂಲಕ ಸಾಬೀತಾಗುತ್ತದೆ.

ದ್ರೋಣಾಚಾರ್ಯರ ಆತ್ಮಾವಲೋಕನವೂ ಸಹ ಈ ನಾಟಕದಲ್ಲಿ ಕಂಡುಬರುವ ಸಾತ್ವಿಕತೆಯ ಮಹತ್ವ ಮತ್ತು ನೈಜ ಗುರುತತ್ತ್ವದ ಅಸ್ಮಿತೆಯ ಹುಡುಕಾಟದ ಚಿತ್ರಣವನ್ನು ನಮ್ಮ ಮುಂದಿಡುತ್ತದೆ.

"ಬಿಂಕಕ್ಕೆ ಡೊಳ್ಳಿವುದದು ವಿದ್ಯೆಯೆ? ಅವಿದ್ಯೆ !
ತವಿಪುದಾವುದೊ ಅಹಂಕಾರಮಂ ಅದು ವಿದ್ಯೆ:
ಮಿಕ್ಕುದೆಲ್ಲಂ ಅವಿದ್ಯೆ!
ವಿದ್ಯೆಯಂಬಾ ಪಸರ ಮರೆಯೊಳಾನ್
ಅವಿದ್ಯೆಯಂ ಪೋಷಿಸುವ ಗುರುವಾದೆನಲ್ತೆ!"

ಅತ್ಯಂತ ಧ್ವನಿಪೂರ್ಣವಾದ ಈ ಮೇಲಿನ ಸಾಲುಗಳಲ್ಲಿ ಅಹಂನಿಂದ ಹಿಗ್ಗಿದ ಅರ್ಜುನನ ದಾಕ್ಷಿಣ್ಯಕ್ಕೆ ಒಳಗಾಗಿ ದ್ರೋಣಾಚಾರ್ಯರು ಇಬ್ಬಂದಿತನದಿಂದ ತೊಳಲಾಡುವ ಚಿತ್ರಣವನ್ನು ಕಾಣಬಹುದಾಗಿದೆ. ತಾನು ಮಾಡಲು ಹೊರಟಿರುವುದು ಅಪರಾಧವೆಂದು ತಿಳಿದಿದ್ದರೂ ಅಸಹಾಯಕತನವೇ ಇಲ್ಲಿ ರಾರಾಜಿಸುತ್ತಿದೆ. ಅರಮನೆ ಸಂಸ್ಕೃತಿಯ ಪ್ರಭಾವ, ವರ್ಚಸ್ಸು, ಕ್ರೌರ್ಯ ಎಂತಹದು ಎಂಬುದಕ್ಕೆ ಇದು ನಿದರ್ಶನವಾಗಿದೆ. ಏಕಲವ್ಯನಿಗೆ ದ್ರೋಣಾಚಾರ್ಯರು ನೀಡುವ ಬಿಲ್ವಿದ್ಯೆಯ ಪರೀಕ್ಷೆಯಲ್ಲಿ ಪಕ್ಷಿಯೊಂದನ್ನು ತೋರಿಸಿ ಅದನ್ನು ಹೊಡೆದುರುಳಿಸಲು ಆಜ್ಞಾಪಿಸುತ್ತಾನೆ. ಈ ಆಜ್ಞೆಯನ್ನು ಏಕಲವ್ಯನು ಅತ್ಯಂತ ದಿಟ್ಟತನದಿಂದ ತಿರಸ್ಕರಿಸುತ್ತಾನೆ. ಕುವೆಂಪು ಚಿತ್ರಿಸುವ ಏಕಲವ್ಯನ ಶಬ್ದವೇಧಿ ಪಾಂಡಿತ್ಯ, ಆ ಪಕ್ಷಿಯ ಹೆಸರನ್ನು ಗುರುತಿಸುವ ಚುರುಕುತನ ಇವೆಲ್ಲವೂ ಆತನನ್ನು ಅಪ್ಪಟ ಜನಪದೀಯ, ಪ್ರಕೃತಿಯ ಕೂಸು, ಮಾನವೀಯತೆಯ ಪ್ರತಿನಿಧಿ ಎಂಬುದನ್ನು ನಮ್ಮ ಮುಂದಿಡುತ್ತವೆ.

"ಬೆರಳ್ ಗೆ ಕೊರಳ್" ಎಂಬ ಶೀರ್ಷಿಕೆಯು ನಾಟಕದ ಪ್ರಚಂಡ ಶಕ್ತಿಯನ್ನು ತನ್ನ ಧ್ವನಿ ನಿರ್ದೇಶನದಿಂದಲೇ ಪ್ರತಿಪಾದಿಸುತ್ತಾ ಸಾಗುತ್ತದೆ. ಸ್ವಾರ್ಥದಿಂದ ಕೂಡಿದ ಗುರುದಕ್ಷಿಣೆಯ ಬಯಕೆಯನ್ನು ತಿರಸ್ಕರಿಸುತ್ತಾ, ಆ ದುಷ್ಟ ಬಯಕೆಗೇ ಒದಗಿದ ಕೇಡನ್ನು ಶೀರ್ಷಿಕೆಯು 'ಕೊರಳ್' ಎಂಬ ಸಾಂಕೇತಿಕತೆಯೊಂದಿಗೆ ಓದುಗರ ಮುಂದಿಡುತ್ತದೆ. ಕುವೆಂಪು ಅವರು ಪೌರಾಣಿಕ ವಸ್ತು ವಿಷಯದಲ್ಲಿಯೇ ದುರಂತ ಸತ್ವವನ್ನು ಹುಡುಕುತ್ತಾ ಸಾಗಿದ್ದಾರೆ. ಆ ನಿಟ್ಟಿನಲ್ಲಿ ಏಕಲವ್ಯನು ತನ್ನ ಹೆಬ್ಬೆರಳನ್ನು ದ್ರೋಣಾಚಾರ್ಯರಿಗೆ ಬಲಿ ನೀಡುವ ಪರಿಕಲ್ಪನೆಯೇ ಅಸಾಧಾರಣವಾದುದಾಗಿದೆ. ಹಾಗಾಗಿ ನಾಟಕದ ಅಂತಿಮ ಭಾಗವಾದ ಈ ಸನ್ನಿವೇಶವನ್ನು 'ಯಜ್ಞ' ಎಂಬುದಾಗಿ ಕರೆಯುತ್ತಾರೆ. ಇಲ್ಲಿ ಏಕಲವ್ಯನ ಅಂತಃಸತ್ವದ ಪರೀಕ್ಷೆ ನಡೆಯುತ್ತದೆ ಎನ್ನಬಹುದು. ವೈದಿಕ ಕಲ್ಪನೆಯಲ್ಲಿ 'ಯಜ್ಞ' ಎಂಬುದು ಮಂತ್ರ, ಹವಿಸ್ಸು ಮುಂತಾದ ಕ್ರಮಗಳಿಂದ ಕೂಡಿದ ಧಾರ್ಮಿಕ ವಿಧಿಯಾಗಿದೆ. ಅದಕ್ಕೆ ಪರ್ಯಾಯವಾಗಿ ಏಕಲವ್ಯನು ಬಲಿ ನೀಡುವ ಪ್ರಸಂಗವನ್ನು ಕುವೆಂಪು ಕಾಣುತ್ತಾರೆ. ಕುವೆಂಪು ಅವರ 'ಯಜ್ಞ' ಎಂಬ ಪರಿಕಲ್ಪನೆಯು ವೈಚಾರಿಕತೆಯಿಂದ ಕೂಡಿದುದಾಗಿದೆ.

"ಆರ್ಗೊ ಬಲಿ ನನ್ನ ಕಂದನ ಬೆರಳ್
ಬಲಿಯಕ್ಕೆ ಆ ಪಾಪಿಯ ಕೊರಳ್!"

ಇಲ್ಲಿ ಬೆರಳಿಗೆ ಪ್ರತಿಯಾಗಿ ಕೊರಳನ್ನು ಕೇಳುವ ಅಬ್ಬೆಗೆ ದ್ರೋಣಾಚಾರ್ಯ ಪಾಪಿಯ ರೂಪದಲ್ಲಿ ಕಾಣುತ್ತಿದ್ದಾನೆ. ಮಾತೃಪ್ರೇಮದ ಸಹಜತೆಯ ನೆಲೆಯಲ್ಲಿ ಯಾವ ಇತರ ದಾಕ್ಷಿಣ್ಯದ ತತ್ತ್ವಗಳು ಗಟ್ಟಿಯಾಗಿ ನಿಲ್ಲುವುದಿಲ್ಲ ಎಂಬ ಮಾತುಗಳಿಗೆ ಈ ಮೇಲಿನ ಸಾಲುಗಳು ಸಾಕ್ಷಿಯಾಗಿವೆ. ಎಲ್ಲಾ ಭ್ರಮೆಗಳಿಗೂ ಕಡಿವಾಣ ಹಾಕುವುದೇ ಈ ಸಹಜವಾದ ಭಾವನೆಗಳು. ಹಾಗಾಗಿ ಇಂತಹ ಸೂಕ್ಷ್ಮ ಸಂವೇದನೆಗಳನ್ನು ಕೆದಕುವ ಮೂಲಕ ಇಡೀ ಸಮಾಜವನ್ನು ಎಚ್ಚರಿಸುವ ಕಾರ್ಯವನ್ನು ಈ ನಾಟಕವು ಕ್ರಿಯಾಶೀಲಗೊಳಿಸುತ್ತದೆ.

ಪರಾಮರ್ಶಿಸಿದ ಕೃತಿಗಳು :

೧. ಕುವೆಂಪು ಅವರ ಮೂರು ನಾಟಕಗಳು : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೨. ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ – ಒಂದು ಅಧ್ಯಯನ : ಡಾ. ಬಿ.ಎಸ್. ಗೀತಾ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೩. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್. ಶೇಷಗಿರಿರಾವ್, ಅಂಕಿತ ಪುಸ್ತಕ, ಬೆಂಗಳೂರು,೨೦೦೬.